

# ನಲ್ಲಿ ನೀರು

■ ಪಾರ್ವತಿ ಪಿಟಗಿ

ಆ ಗ್ರಾಮದ ಅದೊಂದು ಪ್ರಮುಖ ಬೀದಿ ಅಲ್ಲಿ ಹಿಂದೂ, ಮುಸ್ಲಿಂ, ಮರಾಠಾ ಎಂದೆಲ್ಲ ಅವರಿವರೆನ್ನದೇ ಎಲ್ಲ ಜಾತಿ ಜನಾಂಗದ ಜನರು ಕೂಡಿ ಬಾಳುತ್ತಿದ್ದರು.

ಆ ಇಡೀ ಬೀದಿಗೆ ಮೂರ್ನಾಲ್ಕು ಸಾರ್ವಜನಿಕ ನಳಗಳಿದ್ದವು. ಒಂದೊಂದು ನಳದಲ್ಲಿ ಹತ್ತರಿಂದ ಹದಿನೈದು ಮನೆಯವರು ನೀರು ತುಂಬುತ್ತಿದ್ದರು. ಈ ಮೂರ್ನಾಲ್ಕು ನಲ್ಲಿಗಳಲ್ಲಿ ಒಂದು ನಲ್ಲಿ ಮಾತ್ರ ಸದಾ ಸದ್ದುಗದ್ದಲಗಳಿಂದ ಕೂಡಿತ್ತು. ಸಾಮಾನ್ಯವಾಗಿ ನೀರು ಎಲ್ಲರಿಗೂ ಸಾಲುತ್ತಿದ್ದರೂ ನೀರು ತುಂಬಲು ನಾ ಮುಂದೆ ತಾ ಮುಂದೆ ಎನ್ನುವ ವೇಳೆ ಕಲಹ ಹುಟ್ಟಿಕೊಳ್ಳುತ್ತಿತ್ತು. ಆ ನಳದ ಸುತ್ತ ಮುತ್ತ ಬೆಳ್ಳಂಬೆಳಿಗ್ಗೆಯೇ ಸಾಲು ಸಾಲಾಗಿ ಬಣ್ಣ ಬಣ್ಣದ ಪ್ಲಾಸ್ಟಿಕ್ ಕೊಡ, ಬಕೇಟು ಮುಂತಾದವು ಕುಳಿತುಕೊಳ್ಳುತ್ತಿದ್ದವು. ಮಲ್ಲವ್ವ, ಕಾಳವ್ವ, ಮುತ್ತವ್ವ, ರಾಧಕ್ಕ, ಚೆಂಬಣ್ಣ, ಮಾಬೂಬ ಮುಂತಾದವರು ಅಲ್ಲಿ ಸದ್ದುಗದ್ದಲ ಮಾಡುವರು. ಒಂದು ಬಾರಿ ಮೋಡದಿಂದ ಜಗಕೆ ಸೂರ್ಯ ಕಾಣಿಸದೇ ಇರಬಹುದು. ಆದರೆ, ಅಪ್ಪಿತಪ್ಪಿಯೂ ಇವರು ಆ ನಲ್ಲಿಯ ಹತ್ತಿರ ಕಾಣಿಸದೇ ಇರುತ್ತಿರಲಿಲ್ಲ. ಅಷ್ಟೇ ಅಲ್ಲ ಆ ನಳ ಅವರ ಸ್ವಂತದ್ದು ಎಂಬಂತೆ ಒಬ್ಬರಿಗಿಂತ ಇನ್ನೊಬ್ಬರು ಅದರ ಮೇಲೆ ಹಕ್ಕನ್ನು ಸ್ಥಾಪಿಸುತ್ತಿದ್ದರು. ಒಂದು ಬಗೆಯಲ್ಲಿ ಅವರದೇ ಆದ ಅಘೋಷಿತ ಕಮಿಟಿಯೇ ಸ್ಥಾಪನೆಗೊಂಡಂತಾಗಿತ್ತು. ಈ ಅಘೋಷಿತ ಕಮಿಟಿಯ ಸದಸ್ಯರ ಮನೆಯವರು ಮನೆ ಮಕ್ಕಳು ಆ ನಲ್ಲಿಯಲ್ಲಿ ಸ್ವತಂತ್ರವಾಗಿ ನೀರಿನೊಂದಿಗೆ ಆಟವಾಡಿದರೂ ಹಾಗೇ ನೀರು ಪೋಲು ಮಾಡಿದರೂ ಯಾರೂ ಕೇಳುತ್ತಿರಲಿಲ್ಲ.

ಆ ಅಘೋಷಿತ ನಳದ ಕಮಿಟಿಯ ಕಾಳವ್ವ ಸಾಕ್ಷಾತ್ ಕಾಳಿಕಾದೇವಿಯೇ ಸರಿ. ಆಕೆಗೆ ಜನ್ಮ ನೀಡಿದವರಿಗೆ ಮೊದಲೇ ಆಕೆಯ ಅವತಾರ ತಿಳಿದು ಕಾಳಿಕಾ ಎಂದು ಹೆಸರಿಟ್ಟಿದ್ದರೋ ಏನೊ ಎಂಬಂತೆಯೂ ತನ್ನ ಹೆಸರಿಗೆ ಮೋಸ ಮಾಡದಂತೆಯೂ ಆಕೆ ಕಾಳಿಯಾಗಿಯೇ ಬೆಳೆದಳು. ತನ್ನ ಹೆಸರಿಗೆ ಅನ್ವರ್ಥಕವಾಗಿಯೇ ಇದ್ದ ಆಕೆಯ ನಾಲಿಗೆ ಆ ಇಡೀ ಹಳ್ಳಿಯನ್ನೇ ನುಂಗುವಷ್ಟು ಪ್ರಭಲವಾಗಿತ್ತು. ಆಕೆ ತನ್ನ ಖಡ್ಗಕ್ಕಿಂತ ಹರಿತವಾದ ನಾಲಿಗೆಯನ್ನು ತೆರೆದಳೆಂದರೆ ಆಕೆಯ ಎದುರಿಗೆ ನಿಲ್ಲಲು ಎಂತೆಂಥ ಎಂಟೆದೆಯ ಬಂಟರಿಗೂ ಸಾಧ್ಯವಾಗುತ್ತಿರಲಿಲ್ಲ.

ಕಮಿಟಿಯ ಇತರೆ ಸದಸ್ಯರಲ್ಲಿ ನೀರು ತುಂಬಲು ಜಗಳ ಬೈದಾಟ ನಡೆಯುತ್ತಿತ್ತು. ಆದರೆ ಕಾಳವ್ವ ಬಂದರೆ ಮುಗೀತು ಹೇಳದೇ ಕೇಳದೇ ನಳ ಬಿಟ್ಟುಕೊಡುತ್ತಿದ್ದರು. ಬಿಡುವುದೇನು ಬಂತು ಆಕೆ ನಲ್ಲಿಗೆ ಪೈಪು ಹಚ್ಚುತ್ತಿದ್ದಳು. ಇದರಿಂದ ಇತರರಿಗೆ ನೀರಿಗೆ ಕೊರತೆಯಾಗುತ್ತಿತ್ತು. ಆದರೇನು ಮಾಡುವುದು ಆಡಲಾರರು ಅನುಭವಿಸಲಾರರು.

ಒಂದೆರಡು ಬಾರಿ ಮುತ್ತವ್ವ ಸಂಕಟದಿಂದ ತಮ್ಮ ಮನೆಗೂ ಉದ್ದನೆಯ ಪೈಪು ಹಚ್ಚಿಕೊಂಡು ನೀರು ತುಂಬ ತೊಡಗಿದ್ದಳು. ಆಗ ಮಾತ್ರ ದೊಡ್ಡ ಕಲಹವೇ ಹುಟ್ಟಿಕೊಂಡಿತ್ತು. ಅವರು ಪೈಪಿನಿಂದ ನೀರು ತುಂಬುತ್ತಿರುವುದನ್ನು ವಿರೋಧಿಸಿದವರಿಗೆ 'ಅಲ್ಲಾ ಆ ಕಾಳವ್ವ ದಿನಾ ಪೈಪ್ ಹಚ್ಚತಾಳಾ ಆಕೆನ್ನ